ಹರಿದಾಡುವ ಸಾವಿರ ಮಾತುಗಳ ಬಗ್ಗೆ ಪ್ರಪ್ರಥಮ ಬಾರಿಗೆಂಬಂತೆ ವಿಸ್ಮಯ ಪಡುತ್ತಾ ಗರುಡ ನಕ್ಕ. ಈಚೀಚೆಗೆ ಹೀಗೆ ಮುಕ್ತವಾಗಿ ನಗುವುದೂ ಅಪರೂಪವಾಗ್ತಿದೆ ಎಂಬ ಮಾತೊಂದು ಕಿವಿಯಲ್ಲಿ ಉಸುರಿಕೊಂಡಿತು.

ಇನ್ನೂ ಬೆಳಕು ಮೂಡದ ಬೆಳ್ಳಿ ಚುಕ್ಕಿಯ ಆಗಸದ ಕತ್ತಲೆಯಲ್ಲಿ ಕಣ್ಣು ನೆಟ್ಟವನಿಗೆ ಈ ಇಡೀ ದಿನ ರಜೆಯಿಂದ ಎದುರಿಗೊಂದು ಕರಿಯ ಬೃಹತ್ ಆಕೃತಿಯೊಂದು ನಿಂತಂತೆ, ತನ್ನನ್ನು ಒಳಗೊಳ್ಳಲು ಆಹ್ವಾನಿಸಿದಂತೆ ಭಾಸವಾಯ್ತು. ಇಲ್ಲ, ಪ್ರತಿನಿತ್ಯದಂತೆ ಪ್ರತಿ ಮುಂಜಾನೆಯನ್ನ ಸಂತೆಗೆ, ಕತ್ತಲಿಗೆ ಮತ್ತೆ ನಾಳೆಗೆ ದೂಡುತ್ತಾ ಬದುಕುವ ಬದಲು ಎದುರುನಿಂತು ಆಹ್ವಾನಿಸುವ ಈ ದಿನದ ಆಕೃತಿಯನ್ನ ವಿನೂತನವಾಗಿ ಒಳಗೊಳ್ಳಬೇಕು ಎಂದು ತನ್ನೊಳಗಿನ ಗರುಡನಿಗೆ ಅವ ಹೇಳಿಕೊಂಡ. ಕರ್ಣಪಿಶಾಚಿಯಂತಹುದೊಂದು ಧ್ವನಿ ಬಂದು ಕಿವಿಯಲ್ಲಿ 'ಲೋ ಮಗನೇ, ಗರುಡಾ – ಅಲ್ವೋ ನಿಂಗೆ ಪ್ರತಿದಿನದಲ್ಲಿ ಹೊಸತೊಂದು ದಕ್ಕುವ ಸಾಧ್ಯತೆ ಎಲ್ಲಿಂದ ಬಂತು? ನಿನ್ನಂತಹವನಿಗೆ ನಿನ್ನೆಗಳಾದ ದಿನಗಳೇ ವರ್ತಮಾನ. ವಿನೂತನವಾಗಿ ಒಳಗೊಳ್ಳೋದೇನು ಮಣ್ಣು! ನೀನು, ನಾಣಿ, ರಫಿ, ಜಾಗೀರ್ದಾರ, ಅಲ್ಲದೇ ಐತಾಳ – ಎಲ್ಲಿ ಎಂದಾದರೂ ಇಂದಿನ ದಿನದಂದೇ ಇಂದೇ ಬದುಕುವವರಂತೆ ಬದುಕೋದೇ ಆದರೆ... ಹಹ್ಹ... ಎಲ್ಲ ಬಿಟ್ಟು ಮತ್ತೆ ಚಡ್ಡಿ ಹಾಕಿ ಗೋಲಿ ಆಡಬೇಕು ಅಷ್ಟೇ...' ಎಂದಂತಾಗಿ ಗಾಬರಿಯಲ್ಲಿ ಗರುಡ ಬ್ರಷ್‌ನ್ನು ಬಾವಿಗೆ ಬೀಳಿಸಿದ. ತನ್ನೊಳಗೆ ಬೀಳುವ ಎಲ್ಲವನ್ನೂ ಒಳಗೊಳ್ಳುತ್ತಲೇ ಶತಮಾನ ಕಳೆದಿರುವ ಬಾವಿ ತನ್ನ ನೀರನ್ನ ಒಮ್ಮೆ 'ಚಳ್' ಎನ್ನಿಸಿ ಸುಮ್ಮನಾಯ್ತು.

ಗರುಡ ಫಾಲ್ಗುಣ ಬಹುಳ ತದಿಗೆ ಯಾವತ್ತೆಂದು ಬೆರಳು ಮಡಚಿ ಲೆಕ್ಕಹಾಕುತ್ತಾ, ತಟ್ಟನೇ ತನಗೆ ಇಪ್ಪತ್ತೆಂಟು ನಾಳೆಗೆ ತುಂಬುತ್ತೆ ಎನ್ನಿಸಿ ಖಿನ್ನನಾದ. ಇಪ್ಪತ್ತಾರು ತುಂಬಿ, ಇಪ್ಪತ್ತೇಳು ತುಂಬಿ... ಈಗ ಇಪ್ಪತ್ತೆಂಟು ತುಂಬಿ.... ತುಂಬಿ, ತುಂಬಿ ಥತ್ ಈವರೆಗೆ ನಾನು ಬದುಕಿದ್ದು ಬದುಕೇ ಅಲ್ಲ ಎನ್ನಿಸಿದಾಗ ಗರುಡನಿಗೆ ತಬ್ಬಿಬ್ಬಾಯ್ತು. ಅಂದರೆ ಈ ಇಪ್ಪತ್ತೆಂಟು ವರ್ಷದ ಎಲ್ಲ ದಿನಗಳೂ... ನಾನು, ನಾಣಿ, ರಫಿ, ಜಾಗೀರ್ದಾರ, ಐತಾಳ ಹಂಚಿಕೊಂಡ ಈ ಎಲ್ಲ ದಿನಗಳೂ... ಆ ಬಾಲ್ಯದ, ಆ ಯೌವನ, ಬಿಸಿಲಳ್ಳಿಯ ಬಯಲು, ಬಯಲ ಬದುಕು, ಬದುಕಿನ ಕನಸು, ಕನಸಿನ ಹತಾಶೆ, ಎಲ್ಲ ಎಲ್ಲ ಮುಗಿದು ಈಗ ಈ ಬೆಚ್ಚಗಿನ ಬೇಸಿಗೆಯ ಬೆಳಗ್ಗೆ ಮುದಿತನ ಬಂದಂತಾಗಿ ಗರುಡ ಹುಳಿಹುಳಿ ನಕ್ಕ.

ಎಷ್ಟು ಬೇಗ ಸರಿದುಹೋಯಿತು ಕಾಲ? ಏನೂ ಮಾಡದೇ, ಏನೂ ಸಾಧಿಸದೇ, ಏನೂ ಅನುಭವಿಸದೇ, ಏನೂ... ಛೆ! ಬದುಕು, ಕಾಲ ಹೀಗೆ ನಮ್ಮೆಲ್ಲರನ್ನ ಅನಾಥರನ್ನಾಗಿಸಬಾರದಿತ್ತು ಅನ್ನಿಸಿತು ಗರುಡನಿಗೆ. ಎದ್ದು ಒಳಬಂದವನೇ ಪಾಣಿಪಂಚೆ ಉಟ್ಟು ಸ್ನಾನಕ್ಕಿಳಿದವ ಈ ಎಲಾಸ್ಟಿಕ್ ಅಂಡವೇರ್‌ನ ಕಾಲದಲ್ಲಿ ಪಾಣಿಪಂಚೆ, ಸಿಕ್ಕಿಸಲು ಉಳಿಸಿರುವ ಉಡಿದಾರ ನೋಡಿ ಏನೋ ನೆನಪಾಗಿ ಗಹಗಹಿಸಿ ನಕ್ಕ. ಇದೇ ನಾಣಿ 'ಈ ಉಡಿದಾರ ಸೊಂಟದಲ್ಲಿ ಕಟ್ಟಿಕೊಂಡು ನಾನು ಮತ್ತೆ ನನ್ನ ಅಜ್ಜನಂತೆ ಭಾಸವಾಗಿ ಬಿಡ್ತೇನೆ' ಎಂದು ಹೊಳೆಯ ದಡದಲ್ಲಿ ಕಿತ್ತು ಬಿಸಾಡಿರಲಿಲ್ಲವೇ? ಗರುಡನಿಗೆ ಉಡಿದಾರ ಭೂತ ಪ್ರೇತಗಳಿಂದ ಶ್ರೀರಕ್ಷೆ ಎಂಬ ಭಾವನೆ ಆ ಕ್ಷಣದಲ್ಲಿ ನೆನಪಾಗಿ ನಡುಗಿ ಉಳಿಸಿಕೊಂಡದ್ದು ನೆನಪಾಯ್ತು. ಎಷ್ಟು ವರ್ಷದ ಕೆಳಗೆ ಈ ನಾಣಿಯ ಉಡಿದಾರದ ಪ್ರಸಂಗ? ಅದಾಗಿ ಹತ್ತಿರ ಹತ್ತಿರ ಇಪ್ಪತ್ತು ವರ್ಷಗಳೇ ಕಳೆದಿವೆ ಎಂದು ಲೆಕ್ಕ ಸಿಕ್ಕು ಗರುಡನಿಗೆ ಈಗ ಉಡಿದಾರ ಕಿತ್ತು ಬಿಡುವಷ್ಟು ಬೇಸರವಾಯ್ತು.

ಜನಿವಾರದ ಬ್ರಹ್ಮಗಂಟು ಹಿಡಿದು ಜಪ ಮಾಡಲು ಕೂತವನಿಗೆ ಗಾಯತ್ರಿ ಮಂತ್ರದ ಬದಲು ತಲೆಯಲ್ಲಿ ಮಾತುಗಳು ಹುಳಗಳಂತೆ ಪಿತಪಿತನೇ ಎದ್ದೇಳುತ್ತಿರುವಂತೆ ಅನ್ನಿಸ ತೊಡಗಿತು. ನಾಣಿ, ರಫಿ, ಜಾಗೀರದಾರ, ಐತಾಳ ಎಲ್ಲ ಏಕ್‌ದಂ ಬಂದು ಕಿವಿಯಲ್ಲಿ... 'ಥತ್ ಏನಯ್ಯಾ? ನಾವೆಲ್ಲ ಯಾವುದೇ ಸಾಮಾಜಿಕ ಕಾರಣವಿಲ್ಲದೇ, ಕ್ರಾಂತಿಯಿಲ್ಲದೇ, ಸಾಧನೆ ಇಲ್ಲದೇ... ಹೋಗಲಿ ಕನಿಷ್ಠ ಪ್ರೀತಿ, ಪ್ರೇಮ,